Regd B G No. 155

Sri "SATYAVADI"
— DAILY —
MYSORE 4
46 th Year

Protect the cow

— ೨೯ —

ಸತ್ಯವಾದಿ
SATYAVADI

1—9—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸ್ಥಾಪಕರು— ಆರಮನೆ ಸಿಂಸ್ಥೇದಾರ್ ಎಂ. ಏ ಸುಬ್ಬರಾಯರು 2 ನ ಪೈ

ಗೋಸಂರಕ್ಷಣೆ ಮಾಡಿ

ಪ್ರಮುಖ ವೃತ್ತಾಂತಗಳು

ಬೆಂಗಳೂರು 31— ಬೆಂಗಳೂರು ಕಂದಾಯದಜಿಲ್ಲೆಯು ಎಂಡು ಜಿಲ್ಲೆಗಳಾಗಿ ಒಡೆಯಲ್ಪಟ್ಟು, ರಾಜ್ಯದಲ್ಲಿ 20 ಜಿಲ್ಲೆಗಳಾಗಿ ಮಾಡಲ್ಪಡುವುದು

೦ ೦

ಜೋರ್ಹಟ್ (ಅಸ್ಸಾಂ) 30 — 4 ಮಂದಿ ಮರ ಕಡಿಯುವವರನ್ನು 10 ಮಂದಿ ಸಶಸ್ತ್ರ ದೌರ್ಜನ್ಯ ನಾಗಾಗಳು ಹಿಡಿದಿಟ್ಟು ಕೆಲ ಗಂಟೆಗಳ ನಂತರ ಏನೂ ತೊಂದರೆಗೊಳಿಸದೆ ಬಿಟ್ಟಿರುವರು.

೦ ೦

ನ್ಯೂಯಾರ್ಕ್ 31— ಕಾಶ್ಮೀರ್ ಸಮಸ್ಯೆ ಪರಿಶೋಧನೆ ವಿಷಯದಲ್ಲಿ ಒಂದು ರೀತಿ ಒಪ್ಪಂದಕ್ಕೆ ಬರುವದರಲ್ಲಿ ವಿಫಲವಾಯಿತು.

೦ ೦

ವಿಜಯವಾಡ 31— 15 ವರ್ಷಗಳ ನಂತರ ಈ ಸಾರಿ ಕಾಂಗ್ರೆಸ್ಸು ಪಾರ್ಟಿ ಪೌರಸಭೆಯನ್ನು ಹಿಡಿದಿದೆ : 36 ಮಂದಿ ಸಭೆಯಲ್ಲಿ 19 ಸ್ಥಾನ ಗಳಿಸಿದೆ.

೦ ೦

ಬೊಂಬಾಯಿ 31— ವಿಶ್ವ ಸಂಸ್ಥೆ ಕೈಕೆಳಗೆ ಕಾಂಗೋದಲ್ಲಿ ಸೇವೆ ಸಲ್ಲಿಸಿದ 600 ಮಂದಿ ಸೈನಿಕರು ಈ ಬೆಳಿಗ್ಗೆ ವಾಪಸ್ಸು ಬಂದಾಗ ಅತ್ಯಾದರ ಸ್ವಾಗತ ನೀಡಲಾಯಿತು.

೦ ೦

ಭೋಪಾಲ್— ಕಳೆದ ನಾಲ್ಕು ತಿಂಗಳುಗಳಲ್ಲಿ 44 ಮಂದಿ ಡಕಾಯಿತರು ಕೊಲ್ಲಲ್ಪಟ್ಟು 82 ಮಂದಿ ಸೆರೆಹಿಡಿಯಲ್ಪಟ್ಟಿರುವರೆಂದು ವರದಿಯಾಗಿದೆ.

ನಾಳೆಯ ಪಂಚಾಂಗ

ಆಸ್ಥಾನ ವಿದ್ವಾನ್ ವಿದ್ವಾ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
2 ಭಾನುವಾರ ತದಿಗೆ
ಶ್ರೀ ಸ್ವರ್ಣಗೌರೀವ್ರತ

ಪ್ರವಾಹದ ಹಾವಳಿ

ಬೆಂಗಳೂರು 31— ನಗಂಕ್ಕೆ ನೀರು ಸಂಬಂಧಾಗುವ ತಿಪ್ಪಗೊಂಡನಹಳ್ಳಿಯಲ್ಲಿ ತೀವ್ರ ಪ್ರವಾಹವು ಪಂಪಿಂಗ್ ಹೌಸಿಗೆ ನುಗ್ಗಿ ಇಲ್ಲಿನ ನೀರಿನ ಸಂಬರಾಜಿಗೆ ಆತಂಕವುಂಟಾಗಿದೆ — ಅರ್ಕಾವತಿ ನದಿಯಲ್ಲಿನ ಪ್ರವಾಹದಲ್ಲಿ 8 ಮಂದಿ ಸಿಕ್ಕಿಬಿದ್ದಿರುವರು ; ಅವರ ಬಿಡುಗಡೆಗೆ ದೋಣಿಯೊಡನೆ ಇಲ್ಲಿಂದ ಒಂದು ತಂಡವು ಇಲ್ಲಿಂದ ಹೋಯಿತು : ಅರ್ಕಾವತಿ ನದಿಯ ಪ್ರವಾಹದಿಂದ ಬೆಂಗಳೂರು-ಅರಸೀಕೆರೆ ಮತ್ತು ಬೆಂಗಳೂರು-ಮೈಸೂರು ರೈಲುಗಳ ಓಡಾಟದಲ್ಲಿ ಅತಂಕ ಉಂಟಾಯಿತು — ರಾಜ್ಯದ ವಿವಿಧ ಭಾಗದಲ್ಲಿ ಜೋರಾದ ಮಳೆಗಳಾಗಿ, ಅನೇಕ ನದಿಗಳಲ್ಲಿ ನೀರಿನ ಏರುತ್ತಿದೆ.

ಜರ್ಮನಿಯಲ್ಲಿ ವೃಕ್ಷಗಳ ಮ್ಯೂಸಿಯಂ

ಬಾದವಿಾನಬರ್ಗ್ (ಡಾಡ್) — ಪಶ್ಚಿಮ ಜರ್ಮನಿಯ ಆರೋಗ್ಯ ಕೇಂದ್ರವಾದ ಬಾದವಿಾನಬರ್ಗಿನಲ್ಲಿ ಈಗ ಹೊಸ ಬಗೆಯದೊಂದು ಮ್ಯೂಸಿಯಮ್ಮನ್ನು ತೆರೆಯಲಾಗಿದೆ : ಮೂಪಕ್ಕು ಹೆಕ್ಟೇರ್ ಗಳ ವಿಸ್ತೀರ್ಣವುಳ್ಳ ಈ ಮ್ಯೂಸಿಯಮ್ಮಿನಲ್ಲಿ ಹವಿಮೂರು ವಿಧದ ಜಾತಿಗೆ ಸೇರಿದ ವೃಕ್ಷಗಳನ್ನೆಲ್ಲಾ ನೆಡಲಾಗಿದೆ : ಇದಲ್ಲದೆ ಜಗತ್ತಿನ ನಾನಾ ಭಾಗದ ಗಿಡಒಳ್ಳಿಗಳನ್ನೂ ಇಲ್ಲಿ ನೆಡಲಾಗಿದೆ ; ಈ ಮ್ಯೂಸಿಯಮ್ಮಿನಲ್ಲಿ ಪಶ್ಚಿಮ ಜರ್ಮನಿ, ಯೂರೋಪು, ಅಮೇರಿಕಾ, ಏಷ್ಯಾ ಖಂಡಗಳಿಗೆ ಸೇರಿದ ವಿಭಾಗಗಳಿವೆ : ಹಿಮಾಲಯದ ಜೀವನವನ್ನು ಇಲ್ಲಿ ಹಾಗೆಯೇ ಬೆ[illegible] ; ಇಲ್ಲಿನ ಗಿಡ ಮರ ಬಳ್ಳಿ [illegible]6000 ವೈವಿಧ್ಯತೆಯಿದೆ : [illegible]ಪ್ರೇಮಿಗಳಿಗೆ ಇದೊಂದು [illegible] ಕ್ಷೇತ್ರವಾಗಿದೆ.

ಧಾನ್ಯ ಬೆಲೆ ನಿಗದಿಯಿಂದ ಪ್ರಯೋಜನವಿಲ್ಲ

ನವ ದೆಹಲಿ 31 — ಕಾನೂನು ಬದ್ಧವಾಗಿ ಧಾನ್ಯಗಳ ಬೆಲೆ ನಿಗದಿ ಮಾಡುವದರಿಂದ ಕೊಳ್ಳುವವರಿಗಾಗಲಿ ಬೆಳೆಯುವವರಿಗಾಗಲಿ ಪ್ರಯೋಜನವಿಲ್ಲವೆಂದು ಕೇಂದ್ರ ಆಹಾರ ಮಂತ್ರಿ ಶ್ರೀ ಎಸ್ ಕೆ ಪಾಟೀಲರು ತಿಳಿಸಿದ್ದಾರೆ

ಲೋಕಸಭೆ

ನವ ದೆಹಲಿ 31 — ಅಧ್ಯಕ್ಷರ ಅಧಿಕಾರಕ್ಕೆ ಮೊದಲನೆಯ ತೀವ್ರ ಸವಾಲು ಹಾಗೂ ಪಕ್ಷಪಾತಿಯೆಂದು ಮಾಡಿದ ಆರೋಪ ಈ ದಿನ ಗೊಂದಲಕ್ಕೆ ಆಸ್ಪದ ಮಾಡಿತು. ಪ್ರಶ್ನೆಯು ಕಾಲ್ಪನಿಕವೆಂದೊಡನೆ ಈ ರೀತಿ ನಡೆಯಿತು. ಸಮಾಜವಾದಿ ಪಕ್ಷದ ಶ್ರೀ ರಾಮು ಸೇವಕ ಯಾದವರು ಹೆಸರು ಉದ್ದೇಶಿಸಿ ಅವರನ್ನು ಒಂದು ವಾರ ಸಸ್ಪೆಂಡುಮಾಡಿದೆ ಅಧ್ಯಕ್ಷರಲ್ಲಿ ಯಾವಾಗಲೂ ವಿಧೇಯತೆ ಇರಬೇಕೆಂದು ವಿರೋಧ ಪಕ್ಷದವರು ಒಪ್ಪಿದರೂ ಒಂದು ವಾರ ಸಸ್ಪೆಂಡ ಮಾಡುವ ಅಧಿವಾಕ್ಯದಲ್ಲಿ ಭಿನ್ನಾಭಿಪ್ರಾಯವನ್ನು ಹೊಂದಿದ್ದರು ಓಟು ತೆಗೆದು ಕೊಂಡಾಗ 235 ವಿರುದ್ಧವಾಗಿಯೂ 29 ವಿರೋಧವಾಗಿಯೂ ಒಂದವು ಸಿಎಸ್ಪಿ ತಟಸ್ಥವಾಗಿತ್ತು.

★

ನವ ದೆಹಲಿ 21 — ದಕ್ಷಿಣ ಆಫ್ರಿಕದ ವರ್ಣನೀತಿಯನ್ನು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಮುಂದೆ ಭಾರತ ತರುವದು

ನವ ದೆಹಲಿ 31 — ಸ್ವತಂತ್ರ ಪಕ್ಷದ ನಾಯಕರಾದ ರಾಜಾಜಿಯವರ ನೇತೃತ್ವದಲ್ಲಿ ಅಮೆರಿಕ, ಬ್ರಿಟನ್ ಮತ್ತಿತರ ಪಶ್ಚಿಮ ರಾಷ್ಟ್ರಗಳಲ್ಲಿ ಕಾಂತಿಯೋಗ ಹೋಗುವದು ಶ್ರೀಗಳಾದ ಆರ್ ಆರ್ ದಿವಾಕರ್ ಮತ್ತು ಬಿ ಶಿವರಾವ್ ಅವರೊಡನೆ ಹೋಗುವರು

16 ಸಾವಿರ ಅಡಿ ಕೆಳಗೆ ಬಿದ್ದು ಮರಣ

ಬವನಸ್ ಐರಿಸ್ 31— ಟ್ಯುಕುಮಾನಿಂದ ಇಲ್ಲಿಗೆ ಬರುತ್ತಿದ್ದ ವಿಮಾನದಿಂದ ಅಕಸ್ಮಾತ್ತಾಗಿ ಅದರ ಬಾಗಿಲು ತೆರೆಯಲ್ಪಟ್ಟು 23 ವರ್ಷದ ಏರ್‌ಹೋಸ್ಟೆಸ್ ಒಬ್ಬಾಕೆ ಗೋವ್ಸಳು 16 ಸಾವಿರ ಅಡಿ ಎತ್ತರದಿಂದ ಕೆಳಗೆ ಬಿದ್ದು ಸತ್ತಳು.

158½ ವರ್ಷದವ

ಕಲ್ಕತ್ತಾ 31— 24 ಪರಗಣದ ಫಾತೇಪುರದಿಂದ ಬಂದು ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ಒಂದು ಕ್ರಿಮಿನಲ್ ಕೇಸಿನಲ್ಲಿ ಸಾಕ್ಷಿ ಹೇಳಿದ ಷೇಕ್ ಸಾಜೀಬ್ ಎಂಬುವನು ತನಗೆ 158 ವರ್ಷವೆಂದೂ ತಾನು 1804 ರಲ್ಲಿ ಹುಟ್ಟಿದೆಂದೂ ಕೋರ್ಟಿನಲ್ಲಿ ತಿಳಿಸಿದನು.

ರೈಲ್ವೇ ಅವಘಡ

ನವದೆಹಲಿ 31 — ಡಿಯೊಬಾಂಡಿನ ಹತ್ತಿರ ನಿನ್ನೆ ಪಥನಕೋಟಿ ಜನತಾ ಎಕ್ಸ್‌ಪ್ರೆಸ್ಸಿಗೂ ಮುಸ್ಸೂರಿ ಎಕ್ಸ್‌ಪ್ರೆಸ್ಸಿಗೂ ಸಂಘರ್ಷಣೆಯಾಗಿ 64 ಮಂದಿ ಗಾಯಗೊಂಡರು, ಮತ್ತು ಎರಡು ರೈಲುಗಳ ಎಂಜಿನ್ನುಗಳೂ ಮೂರು ಗಾಡಿಗಳೂ ಜಖಂಗೊಂಡವು.

ನವದೆಹಲಿ— ದೇಶದಲ್ಲಿ ಆಹಾರ ಬೆಲೆ ತಗ್ಗಿಸಲು ಮತ್ತು ಹತೋಟಿಗೆ ತರಲು ಎಲ್ಲ ಸಾಧ್ಯ ಕಾರ್ಯಗಳನ್ನೂ ಮಾಡಲಾಗುವುದೆಂದು ಶ್ರೀ ನಂದಾರವರು ಹೇಳಿರುವರು — ರೇಷನಿಂಗು ಒಂದು ವಿಧವಾದರೂ ಅದು ಜನಪ್ರಿಯವಲ್ಲವೆಂದೂ ಅದನ್ನು ಜನರು ಇಚ್ಛಿಸುವದಿಲ್ಲವೆಂದೂ ಅವರು ತಿಳಿಸಿದರು.

ಮಾಸ್ಟರ್ ಪ್ಲಾನ್

ಬೆಂಗಳೂರು 31— ರಾಜ್ಯದಲ್ಲಿ ಮಳೆ ಅಭಾವದಿಂದ ಉದ್ಭವಿಸಿರುವ ಸಮಸ್ಯೆಗೆ ಖಾಯಂ ಪರಿಹಾರ ಸ್ಥಾಪಿಸಲು 40ಕೋಟಿ ರೂಗಳ ಮಾಸ್ಟರ್ ಪ್ಲಾನನ್ನು ಸರಕಾರ ಕೈಗೊಳ್ಳುವುದೆಂದು ಮುಖ್ಯಮಂತ್ರಿಗಳು ಹೇಳಿರುವರು.

★

ಭೂಮಿಯ ಉತ್ಪತ್ತಿ

ಜರ್ಮನ್ ಸಿದ್ಧಾಂತಕ್ಕೆ ಅಂತರರಾಷ್ಟ್ರೀಯ ಅಂಗೀಕಾರ

ಹಾನೋವರ್ (ಡಾಡ್)— ಕಾನ್ಸ್‌ಟೆನ್ಸ್ ಸರೋವರ ತೀರದಲ್ಲಿನ ಅಂಡಾನಗರದಲ್ಲಿ ಪ್ರತಿವರ್ಷವೂ ನೋಬೆಲ್ ಪ್ರಶಸ್ತಿ ವಿಜೇತರೆಲ್ಲರೂ ಒಂದುಗೂಡಿ ಏನಾದರೊಂದು ಉಪಯುಕ್ತ ವಿಷಯವನ್ನು ಚರ್ಚಿಸುವುದು ವಾಡಿಕೆ ; ಇವರಲ್ಲಿ ಬ್ರಿಟಿಷರಾದ ಹೀರ್ಸೆಬರ್ಗ್ ಎಂಬುವವರು, ವಿಶ್ವವು ಹೇಗೆ ಅಸ್ತಿತ್ವಕ್ಕೆ ಬಂದಿತೆಂಬುವರ ಬಗ್ಗೆ ಸಂಶೋಧನೆ ನಡೆಸಿ ಒಂದು ತತ್ವವನ್ನು ಮುಂದಿಟ್ಟಿದ್ದಾರೆ.

ಭೂಮಿಯು ಉತ್ಪತ್ತಿಯ ಬಗ್ಗೆ ಈಗಿರುವ ಅಭಿಪ್ರಾಯ ಬೇಧಗಳನ್ನೆಲ್ಲಾ ಈ ಬಾರಿಯ ಸಮ್ಮೇಳನದಲ್ಲಿ ತೊಡೆದುಹಾಕಬೇಕೆಂದು ಹೀರ್ಸೆಬರ್ಗ್ ಶ್ರಮಿಸಿದರು : ಮೂವತ್ತು ವಿವಿಧ ವಸ್ತುಗಳ ವಿಲೀನವೇ ಭೂಮಿಯ ಉತ್ಪತ್ತಿಗೆ ಕಾರಣವಾಯಿತೆಂದು ಹೀಸೆನಬರ್ಗನು ಅಭಿಪ್ರಾಯಪಟ್ಟಿದ್ದಾರೆ : ಈ ತತ್ವಕ್ಕೆ ಸಕಲರ ಅಂಗೀಕಾರ ದೊರೆಯಿತು : ಈ ' ಭೂಮಿಯ ತತ್ವ ' ವನ್ನು ಅವರು 1958 ರಲ್ಲಿ ಸಿದ್ಧಾಂತ ಮಾಡಿದಾಗಿನಿಂದ ಈ ವಿಷಯದ ಮೇಲೆ ಚರ್ಚೆ ನಡೆಯುತ್ತಲೇ ಇದೆ.

ಖ್ಯಾತ ವಿಜ್ಞಾನಿ ಇಸ್ಟೆನ್‌ರೂ ಇದೇ ತತ್ವವನ್ನು ರೂಪಿಸಲು ಯತ್ನಿಸುತ್ತಿದ್ದು ಸಾಧ್ಯವಾಗುವುದಕ್ಕೆ ಸ್ವಲ್ಪ ಕಾಲದ ಮುನ್ನ ಅದನ್ನು ಹಿಂತೆಗೆದುಕೊಂಡು ಬಿಟ್ಟರು : ಅದೇ ತತ್ವದ ಆಧಾರದ ಮೇಲೆ ಹೀಸೆನಬರ್ಗರು ಕೆಲಸಮಾಡಿದ್ದು, ಲೀಬನೀಜ್ ಎಂಬ ವಿಜ್ಞಾನಿಯು ಅದನ್ನು ಮಹತ್ಸಂಶೋಧನೆಯೆಂದು ಕರೆದಿದ್ದಾರೆ ; ಪ್ರೋಟೋನು, ನ್ಯೂಟ್ರೋನು, ಎಲೆಕ್ಟ್ರೋನು ಮುತಾದವುಗಳೇ ಈ ಮೂವತ್ತು ವಸ್ತುಗಳು : 1943 ರಲ್ಲಿ ಜ್ಯೂ ಎಂಬುವರು ನಿರೂಪಿಸಿದ ತತ್ವಕ್ಕೂ ದೊರಕದಿದ್ದ ಮನ್ನಣೆ ಹೀಸೆನುಬರ್ಗರ ತತ್ವಕ್ಕೆ ದೊರಕಿದೆ.

ಈ ತತ್ವಕ್ಕೆ ಎಂಡು ವರ್ಷಗಳ ಹಿಂದೆ ಅಮೇರಿಕಾದ ವಿಜ್ಞಾನಿ ಡಾ|| ಫೈಫ್ ಮನ್ನಣೆ ಹೆಚ್ಚಿಗೆ ದೊರಕಿದೆ ; ಅಂತೂ ಅದಷ್ಟುಬೇಗ, ಹೀಸೆನಬರ್ಗರವರು ಯಾವುದೇ ಸಂದೇಹವೂ ಉಳಿಯದ ತೆರದಲ್ಲಿ ಸಿದ್ಧಾಂತ ಪಡಿಸುವರೆಂದು ನಂಬಲಾಗಿದೆ.

(ಯೂ ಪಿ ಎಸ್)

SHAKTI
SUDHA

A Superb Tonic

Help The ' Gorakshana '

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋಕ್ಷಣೆ, ವ್ಯಾಣಿಜ್ಯ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ವುಡ್‌ಲ್ಯಾಂಡ್ಸ್ ಶಿನ್ಮ 31—8—62 ರಿಂದ ಅಮೋಘ ಆರಂಭ

ನಯಿ ಮಾ (ಹಿಂದಿ) NAI MAA

ಪಾತ್ರ— ಬಾಲರಾಜ್ ಸಹಾನಿ, ಶ್ಯಾಮ, ಡೈಸಿ ಇರಾನಿ, ಪೀಪ್ ಕನಿವಾಲ್

ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಸಾಂಸಾರಿಕ ಚಿತ್ರ

ದಿನವಹಿ 3 ಪ್ರದರ್ಶನಗಳು

ಒಪೆರಾ— ಕೀರ್ತಿಯುತ 4 ನೇ ವಾರ

ಧರ್ಮಸೆಳೆ ಮಹಾತೆ [ಕನ್ನಡ]

ತಾರಾಗಣ — ಪ್ರತಿಮಾದೇವಿ, ಅಂಜು, ಡಿಕ್ಕಿ ಮಾಧವರಾವ್.

ದಿನವಹಿ 3 ಆಟಗಳು



ಮೀರಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

Printed & Published by the Proprietor, Dharma Sachara Nirata M. S. Krishna Rao. at the Satyavadi Press, Chamarajapuram, Mysore. 4